ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕರೀಗವ್ವಡರ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಲೇಗವ್ವಡ ಕಾಳೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರ್ 254.

ಮೃತಪಟ್ಟ ಪಾಪಯ್ಯಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಲಕ್ಷ್ಮೀನಾರಣಶೆಟ್ಟಿ 2ನೇ ಕೃಷ್ಣಶೆಟ್ಟಿ ಸಹಾ ಮೃತಪಟ್ಟ ಸದರೀ ಪಾಪಯ್ಯಶೆಟ್ಟರಿಗೆ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಲಕ್ಷ್ಮೀನಾರಣಶೆಟ್ಟಿ ಕೃಷ್ಣಶೆಟ್ಟಿ ಸಹ ಸದರೀ ವಾಸಸ್ಥನಾಗಿ ಮೃತಪಟ್ಟ ಪಾಪಯ್ಯಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ಲಕ್ಷ್ಮೀನಾರಣಶೆಟ್ಟಿ ಕೃಷ್ಣಶೆಟ್ಟರ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಪಯ್ಯಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರ್ 255.

ಮೃತಪಟ್ಟ ಬೋರೇಗವ್ವಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಚಿಕ್ಕಲಿಂಗೇಗವ್ವಡನು ಮೃತಪಟ್ಟ ಸದರೀ ಬೋರೆಗವ್ವಡನಿಗೆ ಅಂಣನ ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮಂಡ್ಯದ ತಾಲ್ಲೂಕು ಹುಟ್ಟುಗೆರೆ ಸ್ಥಳದ ಸದರೀ ಚಿಕ್ಕಲಿಂಗೇಗವ್ವಡನು ಸದರೀ ವಾಸಸ್ಥನಾಗಿ ಮೃತಪಟ್ಟ ಬೋರೇಗವ್ವಡರ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚಿಕ್ಕಲಿಂಗೇಗವ್ವಡನ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೋರೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಆರ್ಜೀ ನಂಬರ್ 260.

ಮೃತಪಟ್ಟ ಆದೆಪ್ಪಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಆದೆಪ್ಪ 2ನೇ ಬಸವಶೆಟ್ಟಿ ಇವರುಗಳು ಮೈನರ್ ಗಾರ್ಡಿಯರ್ ಆದ ಮ್ಮನು ಮೃತಪಟ್ಟ ಸದರೀ ಆದೆಪ್ಪಶೆಟ್ಟರಿಗೆ ಮಗ ಮುಮ್ಮಗ ಸೊಸೆ ಸಹ ಆಗಬೇಕೆಂಬ ಹಕ್ಕುದಾರಿ ಮೇಲೆ ಯಡತೊರೆ ತಾಲ್ಲೂಕು ಕಸಬಾ ಹೋಬಳಿ ಚವಕಹಳ್ಳಿ ಸ್ಥಳದ ಸದರೀ ಸಿದ್ದಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಆದೆಪ್ಪಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಸಿದ್ದಮ್ಮನವರ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆದೆಪ್ಪಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಸೆಪ್ಟಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತೊಡನೆ ಕೊಡೋಣಾಗಿದೆ.

ಸಿ. ಶ್ರೀನಿವಾಸಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ನೋಟಿಫಿಕೇಷನ್

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮಾರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು ಈ ಆನೆಯನ್ನ ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ.		ಹಿಡಿಯಲ್ಪಟ್ಟ ತಾರೀಖು.
		ಅಡಿ.	ಅಂಗೆಲ	
ಕಲ್ಯಾಣಿ	ಹೆಂಣು	7	4	28—6—86

ಪರಾ.—ಈ ಆನೆಯು ಚನ್ನಾಗಿ ಚನ್ನಾಗಿ ತಯಾರ್ಮಾಡಲ್ಪಟ್ಟಿದೆ ಮತ್ತು ಯೊಳ್ಳೆ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿ ಲಾಗಾಯತು ಹೊಸ ಆನೆಗಳನ್ನು ತಯಾರ್ಮಾಡಲು ಉಪಯೋಗಿಸಲ್ಪಡುತ್ತಾ ಇದೆ.

ತಾರೀಖು 24ನೇ ಸೆಪ್ಟಂಬರ್ 1890ನೇ ಇಸವಿ.

ಇವರಡೀಕಂಡ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ಸ್‌ಗಳಿಂದ ಮೈಸೂರು ಟರ್ನಗೆ ಇದರ ಕೆಳಗೆ ನಮೂದಿಸಿರುವ ತಪಸೀಲ್ ಮೇರೆ ರೈಲ್ವೆ ಸ್ಲೀಪರಗಳಿಗಾಗಿ ತೇಗದ ಉಂಡೆ ದಿಮ್ಮಿಗಳನ್ನ ಲದಾಯಿ ಮಾಡಲು ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಟ್ಟವೆ:—

ತಾಲ್ಲೂಕು.	ಫಾರೆಸ್ಟ್.	ಸುಮಾರು ಆದದು.	ಸಲೆ ಅಡಿ.
ಹುಣಸೂರು	ದೊಡ್ಡಹರವೆ	150	1500
ಡಿಟೋ	ಮಾವಕಲ್ಲು, ಲಿಂಗಾಪುರ, ಆನೆಚೌಕೂರು, ಬಾಣಾರೆ	150	1500

2. ದರಖಾಸ್ತುದಾರರು ಒಂದೇ ಫಾರೆಸ್ಟ್ಯಗಾಗಲಿ ಅಥವಾ ಹೆಚ್ಚು ಫಾರೆಸ್ಟ್ಸ್‌ಗಳಿಗೆ ಆಗಲಿ ಅಥವಾ ಮೇಲೆ ನಮೂದಿಸಿರುವ ಯಲ್ಲಾ ಫಾರೆಸ್ಟ್ಸುಗಳಿಗಾಗಲಿ ದರಖಾಸ್ತುಗಳನ್ನು ಕಳುಹಿಸ ಬಹುದು.

3. ದರಖಾಸ್ತುಗಳು "ಮೈಸೂರಿಗೆ ತೇಗದ ಉಂಡೇ ಮರಗಳನ್ನು ಸಾಗಿಸುವ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರಿಯಲ್ಪಡತಕ್ಕದ್ದು. ಮತ್ತು ದರಖಾಸ್ತಿನೊಡನೆ 200 ರೂಪಾಯಿಗಳ ಬೆಲೆಯುಳ್ಳ ಕರೆನ್ಸಿ ನೋಟುಗಳನ್ನೂ ಕಳುಹಿಬೇಕು. ಟೆಂಡರುಗಳ ತನಿಖೆ ಮಾಡಿದನಂತರ ಯಿವು ವಾಪಸ್ ಮಾಡಲ್ಪಡುವವು.

4. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರವರಿಂದ ಅಕ್ಟೋಬರ್ ತಾರೀಖು 15ರ ವರಿಗೆ ತೆಗದುಕೊಳ್ಳಲ್ಪಡುವವು.

5. ದರಖಾಸ್ತುದಾರರು ಮೇಲ್ಕಂಡ ಫಾರೆಸ್ಟ್ಯಗಳಿಂದ ಮೈಸೂರಿಗೆ ಸಾಗಿಸುವ ಬಗ್ಯೆ ದರ ಸಲೆ ಅಡಿ ಬಂದಕ್ಕೆ ತಾವು ಬಿಟ್ಟು ಕೊಳ್ಳುವ ಕಮ್ಮಿ ದರವನ್ನು ನಮೂದಿಸತಕ್ಕದ್ದು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ಕಂಟ್ರಾಕ್ಟ್ ಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮೀನು ತರೇಕ ದೊಡ್ಡ ಹರವೆ ಮತ್ತು ಮಾವಕಲ್ಲ ವಗ್ಗೆರೆ ಫಾರೆಸ್ಟ್ಯಗಳಿಗೆ ಪ್ರತಿ ಬಂದಕ್ಕೆ ಐವತ್ತು ರೂಪಾಯಿಗಳ ಮೇರಿಗೆ ತೇವಣಿ ಯಿಡತಕ್ಕದ್ದು.

7. ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೂಲಕ ಕತರಾಯಿ ಕೆಲಸವು ನಡಿಯುವಾಗಲೇ ಲದಾಯಿ ಕೆಲಸವು ನಡಿಯಬೇಕು. ಮತ್ತು ಯಾವ ತುಂಡುಗಳೇ ಆಗಲಿ ನಷ್ಟವಾಗದಂತೆ ನಡಿಸಲ್ಪಡಬೇಕು. ಕತರಾಯಿಸುವ ಕಾಲದಲ್ಲಿ ಕಂಟ್ರಾಕ್ಟುದಾರನ ತರಫ ಒಬ್ಬ ಮುತ್ಸದ್ದಿಯು ಪ್ರತಿ ಫಾರೆಸ್ಟಿನಲ್ಲಿಯು ಹಾಜರ್ ಯಿರತಕ್ಕದ್ದು. ಪ್ರತಿ ತಿಂಗಳಲ್ಲಿಯೂ ಪ್ರತಿ ಫಾರೆಸ್ಟಿನಿಂದ ಆದರ ಬಾಜ್‌ದಲ್ಲಿ ನಮೂದಿಸಿರುವ ಮೊತ್ತದಲ್ಲಿ ಐದರಲ್ಲಿ ಬಂದಭಾಗಕ್ಕೆ ಕಮ್ಮಿ ಯಿಲ್ಲದಂತೆ ಸಾಗಿಸಲ್ಪಡತಕ್ಕದ್ದು.

8. ಅಸಿಸ್ಟೆಂಟ್ ಕ್ಯಸರ್‌ವೇಟರವರು ಕಮ್ಮಿದರದ ದರಖಾಸ್ತು ಅಥವಾ ಯಾವ ಇತರ ದರಖಾಸ್ತನ್ನಾದರು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ, ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

9. ದರಖಾಸ್ತು ಮಾಡಲು ಯಿಚ್ಛೈಸುವ ಕಂಟ್ರಾಕ್ಟುದಾರನು ಯಿನ್ನೂ ಅವಶ್ಯಕವಾದ ತಪಸೀಲ್‌ಗಳನ್ನು ನಮ್ಮ ಆಫೀಸಿನಲ್ಲಿ ತಿಳಿದುಕೊಳ್ಳ ಬಹುದು.

ಬಿ. ರಾಮಸ್ವಾಮಿ ಐಯ್ಯರ್,
ಅಸಿಸ್ಟೆಂಟ್ ಕ್ಯಸರ್‌ವೇಟರ್ ಆಫ್ ಮೈಸೂರ್

ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 116.

ಮೃತಪಟ್ಟ ಮೇಲಸಕ್ಕರೆ ಗಂಗಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹನುಮ ಪುರದ ಮೈನರು ಇವರ ಗಾರ್ಡಿಯರ್ ಮತ್ತು ತಾಯಿ ಲಕ್ಷ್ಮಕ್ಕ ಮೃತಪಟ್ಟ ಸದರೀ ಮೇಲಸಕ್ಕರೆ ಗಂಗಣ್ಣನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಗಿರಿ ತಾಲ್ಲೂಕು ತಾವರೆಕೆರೆ ಸ್ಥಳದ ಮೇಲ್ಕಂಡ ಲಕ್ಷ್ಮಕ್ಕನ್ನನು ಚನ್ನಗಿರಿ ತಾಲ್ಲೂಕು ತಾವರೆಕೆರೆ ವಾಸಸ್ಥನಾಗಿ ಮೃತಪಟ್ಟ ಮೇಲ್ಕಂಡ ಗಂಗಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರಳಾದ ಮೇಲ್ಕಂಡ ಲಕ್ಷ್ಮಕ್ಕನ ಅರ್ಜೀಯನ್ನು 1890ನೇ ಇಸವಿ ನವಂಬರು ತಿಂಗಳು ತಾರೀಖು 17ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೆಲ್ಕಂಡ ಗಂಗಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಸೆಪ್ಟಂಬರ್ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಶೆ. ಕೈಸ್,
ಡಿಸ್ಟ್ರಿಕ್ಟ್ ಜಡ್ಜ್.